ನೆಕ್ ಮ್ಯಾಕ್ಸಿ ಡ್ರೆಸ್, ಮಿಡಿ ಶರ್ಟ್‌ಗಳು ಆಧುನಿಕ ದಿರಿಸುಗಳ ಪಟ್ಟಿಗೆ ಮತ್ತಷ್ಟು ಆಯ್ಕೆಗಳನ್ನು ನೀಡಿವೆ. ಫ್ರಿಲ್ ಹಾಗೂ ಪಫ್ ಸ್ಲೀವ್‌ಗಳನ್ನು ಹೊಂದಿರುವ ಡ್ರೆಸ್‌ಗಳು ರೆಟ್ರೊ ಲುಕ್ ನೆನಪಿಸುತ್ತವೆ. ಆಧುನಿಕ ದಿರಿಸಿಗೆ ಮಾತ್ರವಲ್ಲದೇ, ಲೆಹಂಗಾ, ಸೀರೆಯಂಥ ಭಾರತೀಯ ಸಾಂಪ್ರದಾಯಿಕ ವಸ್ತ್ರಗಳಲ್ಲಿಯೂ ಈ ವಿನ್ಯಾಸ ಛಾಪು ಮೂಡಿಸಿದೆ.

ಸೆಲೆಬ್ರಿಟಿಗಳಿಗೂ ಈ ಹೂವಿನ ಶೈಲಿ ಎಂದಿಗೂ ಬೋರ್ ಹೊಡೆಸಿಲ್ಲ. ಉದ್ದದ ವೈಡ್ ಸ್ಕರ್ಟ್, ಫ್ಲೋರಲ್ ಎಂಬ್ರಾಯ್ಡರಿ ಪ್ಯಾಂಟ್, ಮಿಡಿ, ಮಿನಿ ಡ್ರೆಸ್, ಪ್ಲೇ ಸೂಟ್, ಬ್ಲೇಜರ್ ಎಲ್ಲದರಲ್ಲೂ ತರಹೇವಾರಿ ಹೂವಿನ ವಿನ್ಯಾಸಿತ ಫಂಕಿ ಶೈಲಿಗೆ ಅವರು ಮನಸೋತವರೇ. ಆಯಾ ಕಾಲಕ್ಕೆ ತಕ್ಕಂತೆ ತಿಳಿ, ಗಾಢ ಬಣ್ಣ, ವಿನ್ಯಾಸಗಳ ಆಯ್ಕೆಗಳ ಅವರ ಆದ್ಯತೆಯಲ್ಲಿ ಫ್ಯಾಂಟಸಿ ಫ್ಲೋರಲ್ ಪ್ರಿಂಟ್ ಕೂಡ ಸೇರಿದೆ. ಬಾಲಿವುಡ್ ನಟಿಯರಾದ ಅಲಿಯಾ ಭಟ್, ಕತ್ರೀನಾ ಕೈಫ್, ಅನನ್ಯಾ ಪಾಂಡೆ, ದಿಶಾ ಪಟಾನಿ, ಶಮಿತಾ ಶೆಟ್ಟಿ, ರಿಯಾ ಚಕ್ರವರ್ತಿ ಈಚೆಗೆ ಫ್ಲೋರಲ್ ವಿನ್ಯಾಸಿತ ವಸ್ತ್ರಗಳಲ್ಲಿ ಮಿಂಚಿ, ಅಭಿಮಾನಿಗಳ ಮೆಚ್ಚುಗೆ ಗಿಟ್ಟಿಸಿಕೊಂಡಿದ್ದಾರೆ.

ಇನ್ನು, ವಸ್ತ್ರವಿನ್ಯಾಸಕರ ಪಾಲಿಗೆ ಈ ವಿನ್ಯಾಸ ಎಂದಿಗೂ ಪ್ರಯೋಗದ ವಸ್ತು. 80– 90ರ ದಶಕದಲ್ಲಿದ್ದ ಈ ಶೈಲಿಯನ್ನು ಮತ್ತೆ ಮತ್ತೆ ಪ್ರಯೋಗಕ್ಕೆ ಒಡ್ಡುತ್ತಲೇ ನವೀನತೆಯನ್ನು ಸೃಷ್ಟಿಸುತ್ತಿದ್ದಾರೆ. ಯಾವುದೇ ಶೈಲಿಯ ದಿರಿಸಿಗೂ ಒಗ್ಗಿಸಿಕೊಳ್ಳಬಹುದಾದ್ದು ಹಾಗೂ ಹಲವು ಆಕಾರ, ಬಣ್ಣ, ಗಾತ್ರದಲ್ಲಿ ಸಾಕಷ್ಟು ವಿನ್ಯಾಸಗಳ ಸೃಷ್ಟಿ ಸಾಧ್ಯತೆ, ಈ ವಿನ್ಯಾಸವನ್ನು ವಸ್ತ್ರವಿನ್ಯಾಸಕರು ಮೆಚ್ಚಿರುವುದಕ್ಕಿರುವ ಬಹು ಮುಖ್ಯ ಕಾರಣ. ಹೂವಿನ ಸಣ್ಣ ಪ್ರಿಂಟ್, ದೊಡ್ಡ ಪ್ರಿಂಟ್‌ಗಳಲ್ಲಿಯೇ ಥರಾವರಿ ವಿನ್ಯಾಸ ಸೃಷ್ಟಿಸುವ ಅವರು ಬೇಸಿಗೆಗೆ ತಕ್ಕಂತೆ ತಿಳಿಯಾದ ಬಣ್ಣ ಹಾಗೂ ಚಳಿಗಾಲಕ್ಕೆ ತಕ್ಕಂತೆ ಗಾಢವಾದ ಬಣ್ಣದ ಆಯ್ಕೆ ಮಾಡಿಕೊಳ್ಳುತ್ತಾರೆ. ಈಗ ಲಭ್ಯವಿರುವ ಬಹುಪಾಲು ಆಧುನಿಕ ಶೈಲಿಯ ವಸ್ತ್ರಗಳಲ್ಲಿ ಹೂವಿನ ವಿನ್ಯಾಸದ ಪ್ರಯೋಗ ಶ್ರೀಮಂತ ನೋಟ ದಕ್ಕಿಸಿಕೊಟ್ಟಿವೆ.

ಹೂವಿನ ವಿನ್ಯಾಸ ಈಗ 'ಕ್ಲಾಸಿ ಫ್ಯಾಷನ್' ಬಣ್ಣ ಬಣ್ಣದ ಹೂವಿನ ವಿನ್ಯಾಸವನ್ನು ವಸ್ತ್ರಗಳಲ್ಲಿ ಕಲಾತ್ಮಕವಾಗಿ ಮೂಡಿಸುವ ಈ 'ಫ್ಲೋರಲ್ ವಿನ್ಯಾಸ' ಮೊದಲು ಪಾಶ್ಚಾತ್ಯ ದಿರಿಸುಗಳಲ್ಲಿ ಮಾತ್ರ ಹೆಚ್ಚಾಗಿ ಬಳಕೆಯಲ್ಲಿತ್ತು. ಆದರೆ ಇದೀಗ ಭಾರತೀಯ ಉಡುಗೆ ತೊಡುಗೆಗಳಲ್ಲಿಯೂ ಹೆಚ್ಚಾಗಿ ಬಳಕೆಯಲ್ಲಿದೆ. ರೇಷ್ಮೆ, ಜಾರ್ಜೆಟ್, ಕ್ರೇಪ್ ಯಾವುದೇ ವಸ್ತ್ರದ ಮೇಲೂ ಹೂವಿನ ವಿನ್ಯಾಸವನ್ನು ಇಷ್ಟಪಡುತ್ತಿದ್ದಾರೆ. ಉದಾಹರಣೆಗೆ, ಮೊದಲು ಲೆಹಂಗಾದಲ್ಲಿ ಎಂಬ್ರಾಯ್ಡರಿ ಮಾತ್ರ ಇರುತ್ತಿತ್ತು. ಈಗ ಹೂವಿನ ವಿನ್ಯಾಸಕ್ಕೆ ಒತ್ತು ನೀಡುತ್ತಿದ್ದಾರೆ. ಫ್ಲೋರಲ್ ಡಿಸೈನ್ ಈಗ ಕ್ಲಾಸಿ ಫ್ಯಾಷನ್ ಆಗಿದೆ' ಎನ್ನುತ್ತಾರೆ ಬೆಳಗಾವಿಯ ವಸ್ತ್ರವಿನ್ಯಾಸಕಿ ಸೌಜನ್ಯಾ ಹೆಗಡೆ.

ಸೌಜನ್ಯಾ ಅವರ ಪ್ರಕಾರ, ಈ ವಿನ್ಯಾಸ ಎಲ್ಲಾ ವಯೋಮಾನದವರಿಗೂ ಒಂದಲ್ಲಾ ಒಂದು ರೀತಿ ಅಚ್ಚುಮೆಚ್ಚು. 'ಪ್ರಕೃತಿಯನ್ನು ಪ್ರತಿನಿಧಿಸುವ ಈ ವಿನ್ಯಾಸ ಎಂದಿಗೂ ಇಷ್ಟವಾಗುವ ಸಂಗತಿಯೇ. ವಸ್ತ್ರಗಳ ಮೇಲೆ ಹೂವಿನ ವಿನ್ಯಾಸ ಹಳೇ ಕಾಲದ್ದಾದರೂ 2022ರಲ್ಲಿಯೂ ಟ್ರೆಂಡ್‌ನಲ್ಲಿಯೇ ಇದೆ. ಈ ಶೈಲಿ ಹಿಂದೆಯೂ ಇತ್ತು, ಇಂದಿಗೂ ಇದೆ, ಮುಂದೆಯೂ ಇದ್ದೇ ಇರುತ್ತದೆ. 'ಭಾರತೀಯ ಫ್ಯಾಷನ್ ಪ್ರಿಯರು





ಬಣ್ಣ ಬಣ್ಣದ ಹೂವಿನ ವಿನ್ಯಾಸವನ್ನು ವಸ್ತ್ರಗಳಲ್ಲಿ ಕಲಾತ್ಮಕವಾಗಿ ಮೂಡಿಸುವ ಈ 'ಫ್ಲೋರಲ್ ವಿನ್ಯಾಸ' ಮೊದಲು ಪಾಶ್ಚಾತ್ಯ ದಿರಿಸುಗಳಲ್ಲಿ ಮಾತ್ರ ಹೆಚ್ಚಾಗಿ ಬಳಕೆಯಲ್ಲಿತ್ತು. ಆದರೆ ಇದೀಗ ಭಾರತೀಯ ಉಡುಗೆ ತೊಡುಗೆಗಳಲ್ಲಿಯೂ ಹೆಚ್ಚಾಗಿ ಬಳಕೆಯಲ್ಲಿದೆ.

—ಸೌಜನ್ಯಾ ಹೆಗಡೆ, ವಸ್ತ್ರವಿನ್ಯಾಸಕಿ

'ಫ್ಲೋರಲ್ ಡಿಸೈನ್' ಅನ್ನು ಯಾವುದಾದರೂ ರೂಪದಲ್ಲಿ ಪ್ರಸ್ತುತವಾಗಿಟ್ಟಿರುತ್ತಾರೆ. ಯಾವುದೇ ಹಳೆಯ ಫ್ಯಾಷನ್ ಅನ್ನು ಯಾರೂ ಯಥಾವತ್ತಾಗಿ ಅನುಕರಿಸುವುದಿಲ್ಲ. ಅದರಲ್ಲಿನ ಕೆಲವು ಅಂಶಗಳನ್ನು ಮಾತ್ರ ತೆಗೆದುಕೊಳ್ಳುತ್ತಾರೆ. ಹಾಗೆಯೇ ಹೂವಿನ ವಿನ್ಯಾಸದಲ್ಲಿಯೂ ಕೆಲವು ಅಂಶಗಳನ್ನು ತೆಗೆದುಕೊಂಡು ಹೊಸತನ ಸೃಷ್ಟಿಸಲಾಗುತ್ತದೆ' ಎನ್ನುತ್ತಾರೆ ಅವರು.

ಸದ್ಯಕ್ಕೆ ಬಟ್ಟೆಗಳಲ್ಲಿ ಬಳಸುವ ಹೂವಿನ ವಿನ್ಯಾಸದ ಬಣ್ಣಗಳ ಆಯ್ಕೆ ಬದಲಾಗಿದೆ ಎನ್ನುವುದು ಅವರ ಅಭಿಪ್ರಾಯ. ಢಾಳಾದ ಬಣ್ಣಕ್ಕಿಂತ ತಿಳಿ ಬಣ್ಣದ ಫ್ಲೋರಲ್ ವಿನ್ಯಾಸಕ್ಕೆ ಈಗ ಬೇಡಿಕೆ ಹೆಚ್ಚಿದೆಯಂತೆ. ಜೊತೆಗೆ ಸಾಂಪ್ರದಾಯಿಕ ಶೈಲಿಯ ದಿರಿಸಿಗೂ ಇದೇ ವಿನ್ಯಾಸಕ್ಕೆ ಬೇಡಿಕೆ ಇಡುವ ಯುವತಿಯರು ಹೆಚ್ಚಿದ್ದಾರೆ ಎನ್ನುತ್ತಾರೆ.

## ದಿರಿಸಿನಲ್ಲಿ ಪ್ರಕೃತಿಯ ಪ್ರತಿಫಲನ

ಹೂವುಗಳು ಪ್ರಕೃತಿಯ ಭಾಗ ಎಂಬುದು ಈ ವಿನ್ಯಾಸ ಪ್ರಸಿದ್ಧಿಯಾಗಲು ಬಹುಮುಖ್ಯ ಕಾರಣ. ಪ್ರಕೃತಿಯ ಸುಂದರ ಸೃಷ್ಟಿಗೆ ಸಾಕ್ಷ್ಯದಂತಿರುವ ಹೂವಿನ ಅಂಶವನ್ನು ದಿರಿಸಿನಲ್ಲಿ ಪ್ರತಿಫಲಿಸುವ ಪ್ರಯತ್ನವನ್ನು ಹಿಂದಿನಿಂದಲೂ ವಸ್ತ್ರವಿನ್ಯಾಸಕರು ಮಾಡುತ್ತಾ ಬಂದಿದ್ದಾರೆ. ಹೂವನ್ನು ನವೀನತೆಯ ಸಂಕೇತವಾಗಿಯೂ ನೋಡುವುದರಿಂದ ವರ್ಷ ವರ್ಷವೂ ಈ ವಿನ್ಯಾಸದಲ್ಲಿ ಹೊಸತನವನ್ನು ಮೂಡಿಸಲಾಗುತ್ತಿದೆ. ಹಾಗೆಯೇ ಈ ಹೊಸತನವನ್ನು ಮೆಚ್ಚುವ ಫ್ಯಾಷನ್ ಪ್ರಿಯರೂ ಹೆಚ್ಚಿದ್ದಾರೆ.